2. ಸಂಘ ಸಂಸ್ಥೆಗಳು 597

3. ಇತರೆ 4

ಇ) ಇವೆ.

ಈ) 1. ಒಂದು ನ್ಯಾಯಬೆಲೆ ಅಂಗಡಿಯ ಪರವನಾಗಿಯನ್ನು ರದ್ದುಪಡಿಸಿದೆ.

2. ಒಂದು ನ್ಯಾಯಬೆಲೆ ಅಂಗಡಿಯ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡಿದೆ.

3. ಒಂದು ನ್ಯಾಯಬೆಲೆ ಅಂಗಡಿಯನ್ನು ಅಮಾನತ್ತಿನಲ್ಲಿಡಲಾಗಿದೆ.

ಉ) ಮಾಡಲಾಗುತ್ತಿವೆ.

ಊ) ಹೌದು.

ಋ) ಹೌದು.

ಪಠ್ಯಪುಸ್ತಕ ವಿತರಣೆ ಬಗ್ಗೆ

93 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಪಠ್ಯ ಪುಸ್ತಕಗಳ ಮಾರಾಟವನ್ನು ಖಾಸಗಿಯವರಿಗೆ ವಹಿಸಲು ಸರ್ಕಾರ ಯೋಚಿಸಿದೆಯೇ?

2. ಹಾಗಿದ್ದಲ್ಲಿ, ಯಾವ ವರ್ಷದಿಂದ ಅದು ಜಾರಿಗೆ ಬರಲಿದೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1. ಹೌದು

2. 1992-93ನೇ ವರ್ಷದಿಂದ ಜಾರಿಗೆ ಬರಲಿದೆ.

ಬಸ್ಸುಗಳನ್ನು ರಾಜ್ಯದಲ್ಲಿ ಖಾಸಗಿಯವರಿಗೆ ವಹಿಸುವ ಬಗ್ಗೆ

94 - ಶ್ರೀ ಕೆ.ಎಸ್ ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಸ್ಸುಗಳನ್ನು ಖಾಸಗಿಯವರಿಗೆ ವಹಿಸಲಾಗುವುದೇ?

ಆ) ಈಗ ರಾಷ್ಟ್ರೀಕರಣವಾಗಿರುವ ರಸ್ತೆಗಳಲ್ಲಿ ಖಾಸಗೀ ಬಸ್ಸುಗಳು ಓಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಈ ಪ್ರಶ್ನೆ ಅಪಕ್ವವಾಗಿದೆ.

ಆ) ಹೌದು.

ಮಾಗಡಿ ತಾಲ್ಲೂಕಿನಲ್ಲಿ ವಿದ್ಯುತ್ ದೀಪ ಒದಗಿಸದೇ ಇರುವ ಗ್ರಾಮಗಳ ಸಂಖ್ಯೆ

115 - ಶ್ರೀ ಹೆಚ್. ರೇವಣ್ಣ (ಮಾಗಡಿ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?